# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : | 148 |
| ಸದಸ್ಯರ ಹೆಸರು : | ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ : | 05.03.2025 |
| ಉತ್ತರಿಸುವ ಸಚಿವರು : | ಲೋಕೋಪಯೋಗಿ ಸಚಿವರು |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ತಾಳಗುಪ್ಪದಿಂದ ಅಳ್ನಾವರವರೆಗಿನ ರಾಜ್ಯ ಹೆದ್ದಾರಿ ಅಗಲೀಕರಣ ಪ್ರಕ್ರಿಯೆ ಯಾವ ಹಂತದಲ್ಲಿದೆ: | ಉತ್ತರ ವಲಯದ ವ್ಯಾಪ್ತಿಯಡಿ ಬರುವ ತಾಳಗುಪ್ಪದಿಂದ ಅಳ್ನಾವರವರೆಗಿನ ರಾಜ್ಯ ಹೆದ್ದಾರಿ-93 ಒಟ್ಟು 158.76 ಕಿ.ಮೀ ಉದ್ದವಿದ್ದು, ಅಗಲೀಕರಣಕ್ಕೆ ಒಟ್ಟು 5 ಕಾಮಗಾರಿಗಳು ಅನುಮೋದನೆಗೊಂಡಿರುತ್ತವೆ. ಅವುಗಳ ವಿವರ ಈ ಕೆಳಗಿನಂತಿದೆ:<br><br>**ಉತ್ತರ ಕನ್ನಡ ಜಿಲ್ಲೆಯ ಶಿರಸಿ ವಿಭಾಗದಡಿ**<br><br>1) 2021-22ನೇ ಸಾಲಿನ 5054 ರಾಜ್ಯ ಹೆದ್ದಾರಿ ಸುಧಾರಣೆ ಅಡಿ ಸದರಿ ರಸ್ತೆಯ ಅಗಲೀಕರಣಕ್ಕಾಗಿ ರೂ.1500.00 ಲಕ್ಷ ಅಂದಾಜು ಮೊತ್ತದಲ್ಲಿ ಕಿಮೀ. 145.00 ರಿಂದ 150.00 (5.00 ಕಿ.ಮೀ. ಉದ್ದದಲ್ಲಿ) (ನಗರ ಪರಿಮಿತಿ) 11.00 ರಿಂದ 23.00 ಮೀಟರ್ ರವರೆಗೆ ಅಗಲೀಕರಣ ಕಾಮಗಾರಿ ಅನುಮೋದನೆಯಾಗಿರುತ್ತದೆ.<br><br>2) 2022-23ನೇ ಸಾಲಿನ 5054 ರಾಜ್ಯ ಹೆದ್ದಾರಿ ನವೀಕರಣ ಅಡಿ ರೂ.150.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಕಿಮೀ. 151.30 ರಿಂದ 153.50 ರವರೆಗೆ (02.20 ಕಿ.ಮೀ. ಉದ್ದ) 5.50 ಮೀ 7.00ಮೀ ರವರೆಗೆ ಅಗಲೀಕರಣ ಕಾಮಗಾರಿ ಅನುಮೋದನೆಯಾಗಿರುತ್ತದೆ.<br><br>3) 2022-23ನೇ ಸಾಲಿನ 5054 ರಾಜ್ಯ ಹೆದ್ದಾರಿ ಸುಧಾರಣೆ. ಅಡಿ ರೂ.600.00 ಲಕ್ಷ ಅಂದಾಜು ಮೊತ್ತದಲ್ಲಿ ಕಿಮೀ. 152.20 ರಿಂದ 160.20 ರವರೆಗೆ (08.00 ಕಿ.ಮೀ. ಉದ್ದ) 5.50 ರಿಂದ 7.00 ರವರೆಗೆ ಅಗಲೀಕರಣ ಕಾಮಗಾರಿ ಅನುಮೋದನೆಯಾಗಿರುತ್ತದೆ.<br><br>4) ಎಸ್.ಎಚ್.ಡಿ.ಪಿ ಹಂತ-5 ಘಟ್ಟ-1 ರಡಿ ಹಳಿಯಾಳ ತಾಲ್ಲೂಕಿನ ವ್ಯಾಪ್ತಿಯಲ್ಲಿ ಪ್ಯಾಕೇಜ್ 668ರ (ಎ)ರಡಿ ಸದರಿ ರಾಜ್ಯ ಹೆದ್ದಾರಿ ಸರಪಳಿ 51.60 ರಿಂದ 54.20 ಕಿ.ಮೀ. ವರೆಗೆ (ವಿ.ಡಿ.ಐ.ಟಿ ಕಾಲೇಜು ಕ್ರಾಸ್ ನಿಂದ ಕೆಸರಳ್ಳಿ ಸೇತುವೆಗೆ) ಒಟ್ಟು 2.60 ಕಿ.ಮೀ. ಉದ್ದದ ರಸ್ತೆಯನ್ನು 5.50 ಮೀಟರ್ ನಿಂದ 7.00 ಮೀಟರ್ ಅಗಲೀಕರಣಗೊಳಿಸುವ ಕಾಮಗಾರಿಯನ್ನು |

| | | |
|---|---|---|
| | | ರೂ.600.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲು ಅನುಮೋದನೆಯಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.<br><br>**ಧಾರವಾಡ ವಿಭಾಗದಡಿ**<br><br>5) 2024-25ನೇ ಸಾಲಿನ ಅಪೆಂಡಿಕ್ಸ್-ಇ ಅಡಿಯಲ್ಲಿ ಸದರಿ ರಸ್ತೆಯ ಧಾರವಾಡ ಜಿಲ್ಲೆಯ ಧಾರವಾಡ ವಿಭಾಗದ ಕಿ.ಮೀ. 35.42 ರಿಂದ 39.67 ರ ಆಯ್ದ ಭಾಗಗಳಲ್ಲಿ (ಕಿ.ಮೀ 36.680 ರಿಂದ 36.905, ಕಿ.ಮೀ 38.500 ರಿಂದ ಕಿ.ಮೀ 38.660, ಕಿ.ಮೀ 38.700 ರಿಂದ ಕಿ.ಮೀ 38.945 ಒಟ್ಟು 630 ಮೀಟರ್) ರೂ.250 ಲಕ್ಷ ಮೊತ್ತದಲ್ಲಿ ಕೈಗೊಳ್ಳಲು ಅನುಮೋದನೆಯಾಗಿರುತ್ತದೆ. |
| ಆ) | ಸದರಿ ರಾಜ್ಯ ಹೆದ್ದಾರಿ ಕಾಮಗಾರಿಯನ್ನು ತ್ವರಿತಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು: (ವಿವರ ನೀಡುವುದು) | ಮೇಲ್ಕಂಡ ಕಾಮಗಾರಿಗಳಲ್ಲಿ ಶಿರಸಿ ವಿಭಾಗದಡಿ ಬರುವ ಕ್ರಮ ಸಂಖ್ಯೆ : 1, 2 3 ರ ಕಾಮಗಾರಿಯು ಮುಕ್ತಾಯದ ಹಂತದಲ್ಲಿರುತ್ತದೆ.<br><br>ಧಾರವಾಡ ವಿಭಾಗ ವ್ಯಾಪ್ತಿಯಲ್ಲಿ ಬರುವ 5ನೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಟೆಂಡರ್ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ, 6 ತಿಂಗಳುಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತದೆ.<br><br>ಎಸ್.ಎಚ್.ಡಿ.ಪಿ ಗೆ ಸಂಬಂಧಿಸಿದಂತೆ ಕ್ರಮ ಸಂಖ್ಯೆ: 4 ರಲ್ಲಿರುವ ಕಾಮಗಾರಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ, ಗುತ್ತಿಗೆದಾರರನ್ನು ನೇಮಿಸಿ ಗುತ್ತಿಗೆ ಕಾಲಾವಧಿಯೊಳಗೆ ಪೂರ್ಣಗೊಳಿಸಲಾಗುತ್ತದೆ. |
| ಇ) | ಈ ಕಾಮಗಾರಿಯನ್ನು ಪೂರ್ಣಗೊಳಿಸಲು ತೆಗೆದುಕೊಳ್ಳುವ ಕಾಲಾವಕಾಶವೆಷ್ಟು? | |

ಲೋಇ 66 ಸಿಕ್ಯೂಎನ್ 2025(ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು